ಪ್ರತ್ಯೇಕವಾಗಿ ಗುರುತಿಸಿಕೊಳ್ಳುವುದು ಎಷ್ಟು ಸರಿ. ರಾಧಾ ರಾಜಾ ರೆಡ್ಡಿ ಎಂದೋ, ರಾಜಾ ರಾಧಾ ರೆಡ್ಡಿ ಎಂದೋ ಹೆಸರನ್ನು ಇಟ್ಟುಕೊಳ್ಳಿ' ಎಂದು ಸಲಹೆ ಮಾಡಿದರು. ನನಗೂ ಅದು ಸರಿಯಾದ ಸಲಹೆ ಎಂದು ಅನಿಸಿತು. ಅಂದಿನಿಂದ ಇಂದಿನವರೆಗೂ ನಾನು ರಾಜಾ ರಾಧಾ ರೆಡ್ಡಿ ಎಂದೇ ಗುರುತಿಸಿಕೊಳ್ಳುತ್ತಿದ್ದೇನೆ. ಅಂದು ಇಂದಿರಾಜಿ ಕೊಟ್ಟಿರುವ ಶಾಲು ಈಗಲೂ ನಮ್ಮ ಬಳಿ ಬೆಚ್ಚಗಿದೆ. ಅವರು ನಮಗೆ ದೆಹಲಿಯಲ್ಲಿ ಒಂದು ಮನೆಯನ್ನೂ ಕೊಟ್ಟರು.



**◆ ಈಗಲೂ ಕೂಚಿಪುಡಿ ನೃತ್ಯ ಪ್ರಸ್ತುತಿಯ ಮೇಲೆ ಯಕ್ಷಗಾನದ ಛಾಪು ಇದೆಯೇ?**

ಕೂಚಿಪುಡಿ ಶಾಸ್ತ್ರೀಯ ನೃತ್ಯಪ್ರಕಾರ ಯಕ್ಷಗಾನದಿಂದ ಬಂದಿದೆ. ಕಾಲದ ಪ್ರವಾಹದಲ್ಲಿ ಅತ್ತ ಯಕ್ಷಗಾನವೂ ಬೆಳೆದಿದೆ. ಇತ್ತ ಕೂಚಿಪುಡಿ ನೃತ್ಯ ಪ್ರಸ್ತುತಿಯ ಶೈಲಿಯೂ ಬದಲಾಗಿದೆ. ತೆಲುಗುನಾಡಿನಲ್ಲಿ ಭಾಗವತಂ, ನಾಟಕ, ಯಕ್ಷಗಾನ ಎನ್ನುವುದು ಶ್ರಮಿಕರ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ದಿನವಿಡೀ ಕೃಷಿ ಚಟುವಟಿಕೆಗಳನ್ನು ಮಾಡಿದ ಬಳಿಕ ಬಿಡುವಿನ ವೇಳೆಯಲ್ಲಿ ಅವರು ಭಾಗವತ ಮೇಳವನ್ನು ಮಾಡುತ್ತಿದ್ದರು. ಬಿಡುವಿನ ದಿನಗಳು ದೊರೆತಾಗ ಹಳ್ಳಿಯಿಂದ ಹಳ್ಳಿಗೆ ತೆರಳಿ ಭಾಗವತ ಮೇಳವನ್ನು ಪ್ರಸ್ತುಪಡಿಸುತ್ತಲೂ ಇದ್ದರು. ಭಾಗವತ, ರಾಮಾಯಣ, ಮಹಾಭಾರತ, ಶಿವಲೀಲಾ... ಹೀಗೆ ನಮ್ಮ ದೇಶದಲ್ಲಿ ಕಥೆಗಳು ಅನಂತವಾದುದು ಅಲ್ಲವೇ. ಆದರೆ ಶ್ರಮಿಕವರ್ಗದವರು ಕೇವಲ ಪುರಾಣ ಕಥೆಗಳನ್ನಷ್ಟೇ ಅಲ್ಲ, ಭಾರತದ ಅದ್ಭುತ ಕಥೆಗಳನ್ನು ಹೇಳುತ್ತ ಪ್ರದರ್ಶಿಸುತ್ತ ಇದ್ದರು.

ಒಂದು ಮೇಜು, ಒಂದು ಪರದೆ ಮತ್ತು ಹಿಮ್ಮೇಳದೊಂದಿಗೆ ಅವರು ಕಥೆಗಳನ್ನು ಪ್ರಸ್ತುತಪಡಿಸುತ್ತಿದ್ದರು. ರಾತ್ರಿಯಿಂದ ಮುಂಜಾನೆಯವರೆಗೆ ಭಾಗವತ ಮೇಳಗಳು ನಡೆಯುತ್ತಿದ್ದವು. ತಮಿಳುನಾಡು, ಆಂಧ್ರ , ಕರ್ನಾಟಕ, ಒಡಿಶಾ, ಕೇರಳದಲ್ಲಿಯೂ ಇದು ನಡೆಯುತ್ತಿತ್ತು. ನನ್ನೂರಿನಲ್ಲಿ ನನಗೆ ಭಾಗವತ ಮೇಳ ಮತ್ತು ಕೋಲಾಟವೇ ಬಹಳ ಅದ್ಭುತವಾದ ಪ್ರದರ್ಶನ. ಗಾನ ನೃತ್ಯ ವಾಚಿಕದೊಂದಿಗೆ ನಡೆಯುವ ಈ ಭಾಗವತಂ ಮತ್ತು ಯಕ್ಷಗಾನ ಮೇಳಗಳು ಒಂದು ಕಡೆ ಪ್ರದರ್ಶನ ಮುಗಿಸಿ ಮತ್ತೊಂದು ಕಡೆ ಪ್ರದರ್ಶನಕ್ಕೆ ಹೊರಟಾಗ ನಾನೂ ಅವರ ಹಿಂದೆಯೇ ಓಡುತ್ತಿದ್ದೆ. ಪ್ರತಿದಿನ ಅದೇ ಕಥೆಗಳನ್ನೇ ಅವರು ಹೇಳಿದರೂ ಕೇಳಲು ಇಷ್ಟವಾಗುತ್ತಿತ್ತು. ಮನೆಯಲ್ಲಿ ಹೇಳದೆಯೇ ನಾನು ರಾತ್ರಿಯಿಡೀ ಈ ಮೇಳಗಳ ಹಿಂದೆ ಓಡುತ್ತಿದ್ದೆನಲ್ಲ. ನನ್ನ ಅಲೆದಾಟವನ್ನು ನೋಡಿದ ಕಲಾವಿದರು ಕೆಲವೊಮ್ಮೆ ಚಿಕ್ಕಪುಟ್ಟ ಪಾತ್ರಗಳನ್ನು ನನಗೆ ಕೊಡುತ್ತಿದ್ದರು. ಒಂದೂರಿನಲ್ಲಿ ಹೀಗೆಯೇ ಮಹಾಭಾರತದ ಕಥಾನಕವನ್ನು ಆಯೋಜಿಸಿದ್ದರು. ಆ ಊರಿಗೆ ಅಪ್ಪನೂ ಬಂದು ಪ್ರೇಕ್ಷಕರ ಸಾಲಿನಲ್ಲಿ ಕುಳಿತಿದ್ದರು. ನಾನೋ, ಅಪ್ಪ ಅಮ್ಮನಿಗೆ ಗೊತ್ತಾಗದ ಹಾಗೇ ಮೇಳದೊಡನೆ ಓಡಿ ಹೋಗುವುದು ಹೇಗೆಂದು ದಿನವೂ ಯೋಚಿಸುತ್ತಿರುವವನು. ಮನೆಯ ಉಸಾಬರಿಗಳು ಎಲ್ಲಿ ಅರ್ಥವಾಗಬೇಕು? ಅಪ್ಪ ಎಲ್ಲಿ ಹೋಗುತ್ತಾರೆ, ಏನು ಮಾಡುತ್ತಾರೆ ಎಂದು ತಿಳಿಯುವ ವ್ಯವಧಾನ ಇರಬೇಕಲ್ವ. ಅಪ್ಪ ಆ ಊರಿಗೆ ಬಂದಿದ್ದು ನನಗೆ ಗೊತ್ತೇ ಇರಲಿಲ್ಲ. ನಾನು ವೇದಿಕೆಯ ಮೇಲೆ ಅಭಿಮನ್ಯು ಪಾತ್ರದಲ್ಲಿ ಕಾಣಿಸಿಕೊಂಡಾಗ, ಅಪ್ಪನ ಸ್ನೇಹಿತರು, 'ಇದು ತಮ್ಮ ಮಗನೇ ಅಲ್ಲವೇ' ಎಂದು ಕೇಳಿದರು.